ಮೈಸೂರಿನ ಕೆ.ಆರ್.ಆಸ್ಪತ್ರೆಯ ಕಟ್ಟಡ.

1579 - ಶ್ರೀ ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮೈಸೂರಿನ ಕೆ.ಆರ್. ಆಸ್ಪತ್ರೆಯ ಆವರಣದಲ್ಲಿ ಕಟ್ಟಿರುವ ನೂತನ ಕಟ್ಟಡದಲ್ಲಿ ಎಷ್ಟು ವಾರ್ಡ್‌ಗಳಾಗಿ ವಿಂಗಡಿಸಲಾಗಿದೆ. ಈ ವಾರ್ಡ್‌ಗಳಿಗೆ ಎಲ್ಲಾ ಅಗತ್ಯ ಸೌಲಭ್ಯ ಒದಗಿಸಲಾಗಿದೆಯೇ?*

2) *ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅಗತ್ಯ ಸಲಕರಣೆ, ಉಪಕರಣಗಳು, ಸರಬರಾಜು ಸಿಗುವಲ್ಲಿ ವಿಳಂಬವಾಗಿದ್ದು ಕಟ್ಟಡದ ಉದ್ಘಾಟನೆಯಾಗದೇ ರೋಗಿಗಳಿಗೆ ಅನಾನುಕೂಲವಾಗಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

3) *ಈ ಆಸ್ಪತ್ರೆಯಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ. ಎಷ್ಟು ವರ್ಗಗಳ ಹುದ್ದೆ ಖಾಲಿ ಇವೆ? ಯಾವಾಗ ಭರ್ತಿ ಮಾಡಲಾಗುವುದು?*

ಡಾ॥ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ಈ ಆಸ್ಪತ್ರೆಯ ಆವರಣದಲ್ಲಿ ನೂತನವಾಗಿ ಕಟ್ಟಿರುವ ಕಟ್ಟಡವನ್ನು ವೈದ್ಯಕೀಯ ವಿಭಾಗ ಹಾಗೂ ಶಸ್ತ್ರ ಚಿಕಿತ್ಸಾ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಹಾಲಿ ವೈದ್ಯಕೀಯ ವಿಭಾಗ ಕಾರ್ಯನಿರ್ವಹಿಸುತ್ತಿದೆ (19 ವಾರ್ಡ್‌ಗಳು). ಶಸ್ತ್ರ ಚಿಕಿತ್ಸಾ ವಿಭಾಗವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಶೇ. 80 ಭಾಗದಷ್ಟು ಸಲಕರಣೆ : ಉಪಕರಣ ಸರಬರಾಜಾಗಿದೆ. ಉಳಿದ ಓ.ಟಿ. ಟೇಬಲ್ ಇನ್ನಿತರೆ ಅತ್ಯಾವಶ್ಯಕವಾದ ಉಪಕರಣ:ಸಲಕರಣೆಗಳು ಸರಬರಾಜು ಆದ ತಕ್ಷಣ ಈ ವಿಭಾಗವನ್ನು ಪ್ರಾರಂಭಿಸಲಾಗುವುದು.

2) ಶಸ್ತ್ರ ಚಿಕಿತ್ಸಾಗಾರಕ್ಕೆ ಬೇಕಾಗಿರುವ ಓ.ಟಿ. ಟೇಬಲ್‌ಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. ಈಗಾಗಲೇ ಒಂದು ಓ.ಟಿ.ಟೇಬಲ್‌ನ್ನು ಸರಬರಾಜು ಮಾಡಲಾಗಿದೆ. ಉಳಿದ 5 ಓ.ಟಿ. ಲೈಟ್‌ಗಳನ್ನು ಮತ್ತು 3 ಪೋರ್ಟಬಲ್ ಶಾಡೋಲೆಸ್ ಲ್ಯಾಂಪ್ ಖರೀದಿ ಮಾಡಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಸರಬರಾಜು ಮಾಡಲು ಆದೇಶವನ್ನು ನೀಡಲಾಗಿದೆ. ಇದು ಸರಬರಾಜು ಆಗುವ ಹಂತದಲ್ಲಿದೆ.

3) ಖಾಲಿ ಇದ್ದ ಕೆಲವು ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ. ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು, ಇವುಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ಪ್ರಾರಂಭವಾಗಿದೆ.

1)	ಶಸ್ತ್ರ ಚಿಕಿತ್ಸಕರು	-	1
2)	ಶುಶ್ರೂಷಾಧಾದಿ ಅಧೀಕ್ಷಕರು ದರ್ಜೆ 1	-	4
3)	ಹಿರಿಯ ಶುಶ್ರೂಷಾ ದಾದಿಯರು	-	4
4)	ಶುಶ್ರೂಷಾ ದಾದಿಯರು	-	43

5)	ದ್ವಿತೀಯ ದರ್ಜೆ ಸಹಾಯಕರು	-	1
6)	ಶುಶ್ರೂಷಕ ಬೋಧಕರು	-	1
7)	ಡಯಟಿಷಿಯನ್	-	1
8)	ಫಿಜಿಯೋತೆರಫಿಸ್ಟ್	-	1
9)	ಎಲೆಕ್ಟ್ರಿಷಿಯನ್	-	1
10)	ರೇಡಿಯೋಗ್ರಾಫರ್	-	1
11)	ಇಸಿಜಿ ಟೆಕ್ನಿಷಿಯನ್	-	1
12)	ರಕ್ತ ನಿಧಿ ತಂತ್ರಜ್ಞ	-	1
13)	ವಾಹನ ಚಾಲಕರು	-	2
14)	ಗ್ರೂಪ್-ಡಿ ನೌಕರರು	-	46

ಪ್ರೌಢ ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು.

1581 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಗತ್ಯತೆಯ ಆಧಾರದ ಮೇಲೆ ಸರ್ಕಾರಿ ಪ್ರೌಢಶಾಲೆಗಳನ್ನು ಜೂನಿಯರ್ ಕಾಲೇಜುಗಳಾಗಿ ಮೇಲ್ದರ್ಜೆಗೆ ಏರಿಸುವ ಯೋಚನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, 1998-99ರಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಜೂನಿಯರ್ ಕಾಲೇಜುಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) 1998-99ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಿರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳು.

1582 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಕಳೆದ ಸಾಲಿನಲ್ಲಿ ಎಷ್ಟು ಗ್ರಂಥಾಲಯಗಳನ್ನು ತೆರೆಯಲಾಗಿದೆ?